


ಮೇಲೆ ಬಂದರು. ಇಡೀ ಕಾರಿಡಾರ್‌ನಲ್ಲಿ ಯಾರೆಂದರೆ ಯಾರ ಸುಳಿವೂ ಇಲ್ಲ. ಆದರೆ, ಅದರ ತುತ್ತತುದಿಯಲ್ಲಿ ಗೋಡೆಗೆ ತಲೆ ಆನಿಸಿ ಯಾರೋ ಕುಳಿತಿರುವುದು ಕಾಣಿಸಿತು. ಸನಿಹ ಸರಿದಂತೆ ಕಾಣಿಸಿದ್ದು ಅಪ್ಪ. ಅವರ ದೃಷ್ಟಿ ನಿಶ್ಚಲವಾಗಿ ಆಸ್ಪತ್ರೆಯಾಚೆಗಿನ ಆಕಾಶ ನೋಡುತ್ತಿತ್ತು. ಹತ್ತಿರ ಸರಿದು, 'ದೇವ್ರೂ' ಎನ್ನುತ್ತಾ ಹೆಗಲು ಮುಟ್ಟಿದರಂತೆ ಅಮ್ಮ.

ಆ ಕ್ಷಣಕ್ಕೆ ಕಣ್ಣೀರು ದಳದಳ ಧಾರೆಯಾಗಿ ಕೆನ್ನೆಯಿಂದ ಇಳಿಯುತ್ತಿತ್ತು. ಮತ್ತೆ ಎಷ್ಟೇ ಭುಜ ಅಲುಗಿಸಿದರೂ ಅಪ್ಪ ಮಾತೇ ಆಡಲಿಲ್ಲ. ಅವರು ರಾತ್ರಿಯಿಡೀ ನಿದ್ದೆ ಮಾಡದೆ ಅಲ್ಲೇ ಕುಳಿತಿದ್ದಾರೋ? ಅಮ್ಮನಿಗೆ ತಕ್ಷಣ ಅನುಮಾನ ಬಂದಿದೆ. ತಕ್ಷಣ ಒಂದೇ ಉಸಿರಿಗೆ ಓಡಿ ಎನ್‌ಐಸಿಯೂ ಬಾಗಿಲು ತಳ್ಳಿ ಒಳಗೆ ನುಗ್ಗಿದ್ದಾರೆ. ತಡೆಯಲು ಬಂದ ನರ್ಸನ್ನೂ ಹಿಂದಕ್ಕೆ ತಳ್ಳಿದ್ದಾರೆ. ಮಗುವಿನ ಬಳಿ ಹೋಗಿ ನಿಂತವರಿಗೆ ಜೀವ ಹಿಡಿಹಿಡಿಯಾಗಿದೆ.

ಆ ಪುಟ್ಟ ಜೀವ ರಕ್ತ ಜಿನುಗಿದಂತೆ ಕೆಂಪಾಗಿದೆ.

ಇಷ್ಟು ದಿನ ಇಡೀ ದೇಹದ ತುಂಬ ನೀಲಿ ನೀಲಿಯಾಗಿ ಕಾಣುತ್ತಿದ್ದ ನರತಂತುಗಳು ಕೆಂಪಗಾಗಿ ಮೇಲೆ ಬಂದಿವೆ. ಮುಖ, ಕಣ್ಣು, ತುಟಿಯ ಬಳಿ, ಗಲ್ಲ, ಮೈಕೈ ತುಂಬಾ ಕೆಂಪು ಕೆಂಪು. ಕೈಯಿಟ್ಟರೆ ರಕ್ತ ಅಂಟಿಕೊಳ್ಳಬಹುದು ಅನ್ನೋ ಹಾಗೆ. ಅಮ್ಮ ಒಂದು ಕ್ಷಣವೂ ಅಲ್ಲಿ ನಿಲ್ಲಲಿಲ್ಲ. ಹೋದ ರಭಸದಲ್ಲಿಯೇ ಹೊರಗೋಡಿ ಬಂದರು. ಆ ವಾರ್ಡಿನ ಎದುರು ನೆಲದ ಮೇಲೆ ದೊಪ್ಪನೆ ಕುಳಿತು ಸೆರಗನ್ನು ಬಾಯಿಯೊಳಗೆ ತುರುಕಿಕೊಂಡು ಬಿಕ್ಕಿಬಿಕ್ಕಿ